## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ವಿರಾಜಪೇಟೆ

**ಸಿ.ಸಿ. 77/2024**

**ಪಿರ್ಯಾದುದಾರರು ವಿರುದ್ಧ ಆರೋಪಿ**

ಸಿದ್ದಾಪುರ ಪೋಲೀಸ್ ಠಾಣೆ ಗಣಪತಿ ಸಿ ಡಿ

:: **ದೋಷಾರೋಪಣೆ** ::

**ಶ್ರೀ ಸಂತೋಷ ಕೊಠಾರಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,ವಿರಾಜಪೇಟೆ, ಆದ ನಾನು ನಿನ್ನ ಮೇಲೆ ಅಂದರೆಃ**

ಗಣಪತಿ ಸಿ ಡಿ, ತಂದೆಃ ಲೇಟ್ ಸಿ ಎಂ ದೇವಯ್ಯ, ಪ್ರಾಯ 47 ವರ್ಷ,
ವಾಸಃ ಕಾಮಧೇನು ಎಸ್ಟೇಟ್, ಗುಹ್ಯ ಗ್ರಾಮ, ವಿರಾಜಪೇಟೆ ತಾ||
ಕೊಡಗು ಜಿಲ್ಲೆ.

**ಈ ಕೆಳಗಿನಂತೆ ದೋಷಾರೋಪಣೆ ಹೊರೆಸಿದ್ದೇನೆಃ**

ದಿನಾಂಕ **18-11-2023** ರಂದು ಸಂಜೆ ಸುಮಾರು 5.30 ಗಂಟೆಗೆ ಸಿದ್ದಾಪುರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಸಿದ್ದಾಪುರ ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ಸಾಕ್ಷಿ1 ರವರು ವಾಹನ ಸಂಚಾರ ನಿಯಂತ್ರಣ ಕರ್ತವ್ಯದಲ್ಲಿರುವಾಗ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ 12 ಕೆ 2899 ನೋಂದಣಿ ಸಂಖ್ಯೆಯ ರಾಯಲ್ ಎನ್ ಫೀಲ್ಡ್ ಬೈಕ್ ನ್ನು ಸಾರ್ವಜನಿಕರಿಗೆ ತೊಂದರೆಯಾಗುವಂತೆ ನಿಲ್ಲಿಸಿದ್ದು, ಸಾಕ್ಷಿ1 ರವರು ಸದರಿ ಮೋಟಾರ್ ಬೈಕ್ ನ ಬಳಿ ಹೋಗಿ ಯಾರದ್ದು ಈ ಬೈಕ್, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಬೈಕ್ ನ್ನು ತೆಗೆರಿ ಎಂದು ಹೇಳಿದಾಗ ಅಲ್ಲಿಯೇ ಪಕ್ಕದಲ್ಲಿದ್ದ ಆರೋಪಿಯಾದ ನೀವು ಬೈಕ್ ನ ಬಳಿಗೆ ಬಂದು ಸಮವಸ್ತ್ರದಲ್ಲ ಸಾಕ್ಷಿ1 ರವರನ್ನು ಕುರಿತು ಬೈಕ್ ತೆಗಿ ಎಂದು ಹೇಳಲು ನೀನು ಯಾವನೋ ನಾನು ಬೈಕ್ ತೆಗೆಯುವುದಿಲ್ಲ ಸೂಳೇ ಮಗನೇ ಎಂಬುದಾಗಿ ಅವಾಚ್ಯ ಶಬ್ದಗಳಿಂದ ಕೊಡವ ಭಾಷೆಯಲ್ಲಿ ಬೈದಿದ್ದು, ಆ ಮೂಲಕ ಆರೋಪಿಯಾದ ನೀನು ಭಾ.ದಂ.ಸಂ.ಕಲಂ 504 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ಸಮಯ, ಸ್ಥಳ, ದಿನಾಂಕದಂದು ಮೇಲೆ ಹೇಳಿದಂತೆ ಆರೋಪಿಯಾದ ನೀವು ಸಾಕ್ಷಿ1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು, ಸಾಕ್ಷಿ1 ರವರ ಕರ್ತವ್ಯಕ್ಕೆ ಅಡ್ಡಿಪಡಿಸಿ, ಹೆಲ್ಮೆಟ್ ನಿಂದ ಅವರ ತಲೆಯ ಭಾಗಕ್ಕೆ ಹಾಗೂ ಎಡಕೈಗೆ ಹಲ್ಲೆ ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 353 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ಸಮಯ, ಸ್ಥಳ, ದಿನಾಂಕದಂದು ಮೇಲೆ ಹೇಳಿದಂತೆ ಆರೋಪಿಯಾದ ನೀವು ಕೃತ್ಯವನ್ನು ಮುಂದುವರೆಸುತ್ತಾ ಸಾಕ್ಷಿ1 ರವರಿಗೆ ಮೇಲೆ ಹೇಳಿದಂತೆ ಅವಾಚ್ಯ ಶಬ್ಧಗಳಿಂದ ಬೈದು, ಸಾರ್ವಜನಿಕರ ಕರ್ತವ್ಯಕ್ಕೆ ಅಡ್ಡಿಪಡಿಸಿ ಅವರು ಸಾರ್ವಜನಿಕ ಕರ್ತವ್ಯವನ್ನು

ನಿರ್ವಹಿಸದಂತೆ ಬೆದರಿಸುವ ಉದ್ದೇಶದಿಂದ ಆರೋಪಿಯಾದ ನೀವು ನಿಮ್ಮ ಕೈಯಲ್ಲಿದ್ದ ಹೆಲ್ಮೆಟ್ ನಿಂದ ಸಾಕ್ಷಿ1 ರವರ ತಲೆಯ ಭಾಗಕ್ಕೆ ಹಾಗು ಎಡಕೈಗೆ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 332 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆರೋಪಕ್ಕೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

ಪ್ರ-1: ಮೇಲಿನ ದೋಷಾರೋಪಣೆಯನ್ನು ಓದಿ, ತಿಳಿಸಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೆ?

ಉತ್ತರಃ

ಪ್ರ-2: ನೀವು ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಛಿಸುತ್ತೀರೋ?

ಉತ್ತರಃ

(ಮೇಲಿನ ದೋಪಾರೋಪಣೆಯನ್ನು ಆರೋಪಿಗೆ ಓದಿ, ತಿಳಿಸಿ ಹೇಳಿದ ನಂತರ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ).

ದಿನಾಂಕ 29 ನೇ ಆಗಸ್ಟ್ ಮಾಹೆ 2024.

ಸಹಿಃ

(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ.